# ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,
# ಹಾಗು ವಿಶೇಷ ನ್ಯಾಯಾಲಯ. ಹಾವೇರಿ

**ಪ್ರಕರಣ ಸಂಖ್ಯೆಃ ಸ್ಪೆಷಲ್ ಎಸ್.ಸಿ/ಎಸ್.ಟಿ.06/2026**

**ಪಿರ್ಯಾದಿಃ** ಹಲಗೇರಿ ಪೊಲೀಸ್ ಠಾಣೆ

**-ವಿರುದ್ಧ-**

**ಆರೋಪಿತರುಃ**

1. ಚಿಕ್ಕಪ್ಪ ನಂಜಪ್ಪ ಬಿದರಿ
   ವಯಸ್ಸುಃ 78 ವರ್ಷ,
2. ನಿಂಗಪ್ಪ ನಂಜಪ್ಪ ಬಿದರಿ
   ವಯಸ್ಸುಃ 58 ವರ್ಷ,
3. ಹಾಲಪ್ಪ ನಂಜಪ್ಪ ಬಿದರಿ
   ವಯಸ್ಸುಃ 52 ವರ್ಷ,
4. ಮಂಜಪ್ಪ ನಂಜಪ್ಪ ಬಿದರಿ
   ವಯಸ್ಸುಃ 55 ವರ್ಷ,
5. ಗುಡ್ಡಪ್ಪ ಮಹದೇವಪ್ಪ ಬಿದರಿ
   ವಯಸ್ಸುಃ 60 ವರ್ಷ,
6. ಪರ್ವತಪ್ಪ ನಂಜಪ್ಪ ಬಿದರಿ
   ವಯಸ್ಸುಃ 66 ವರ್ಷ,
7. ಗುರುರಾಜ ಪರ್ವತಪ್ಪ ಬಿದರಿ
   ವಯಸ್ಸುಃ 32 ವರ್ಷ,

ಎಲ್ಲರೂ ಸಾಃ ಇಟಗಿ ತಾಃ ರಾಣೇಬೆನ್ನೂರು

# ದೋಷಾರೋಪಣೆ

ಶ್ರೀ ಎನ್.ಎಂ. ರಮೇಶ, ಬಿ.ಕಾಂ. ಎಲ್.ಎಲ್.ಬಿ., ಎಲ್.ಎಲ್.ಎಂ. ಹಾವೇರಿಯ ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಎಂಬ ನಾನು ಆರೋಪಿತರಾದ ನಿಮ್ಮ ಮೇಲೆ ಈ ಕೆಳಕಂಡಂತೆ ಹೊರಿಸುವ ದೋಷಾರೋಪಣೆಗಳೇನೆಂದರೆ,

1. ಈ ಪ್ರಕರಣದ ಆರೋಪಿತರಾದ ನಿಮಗೂ ಹಾಗೂ ಪಿರ್ಯಾದಿದಾರರಿಗೂ ಸರ್ವೇ ನಂ.353/4 ರ 02 ಗುಂಟೆ ಜಮೀನಿನಲ್ಲಿ ಓಡಾಡುವ ಸಂಬಂಧ ಸುಮಾರು ವರ್ಷಗಳಿಂದ ತಂಟೆ ಇದ್ದು, ನಿಮ್ಮ ನಡುವೆ ದ್ವೇಷವಿದ್ದು, ಅದರ ಹಿನ್ನೆಲೆಯಲ್ಲಿ ದಿನಾಂಕಃ27.12.2025 ರಂದು ಮುಂಜಾನೆ 7.30 ಗಂಟೆ ಸುಮಾರಿಗೆ ಪಿರ್ಯಾದಿದಾರರಾದ ರೇವಣೆಪ್ಪ ದೇವರಮನಿ ಇವರು ಮೇವು ಹೊತ್ತುಕೊಂಡು ಅವರ ಮಗ ಚಾಸಾ-4 ರವರೊಂದಿಗೆ ತಮ್ಮ ಕಣದಲ್ಲಿ ದಾರಿ ಹಿಡಿದು ಬರುತ್ತಿದ್ದಾಗ ಆರೋಪಿತರಾದ ನೀವೆಲ್ಲರೂ ಅಪರಾಧ ಎಸಗುವ ಏಕೊದ್ದೇಶವನ್ನು ಹೊಂದಿ ಅಕ್ರಮ ಗುಂಪು ಕಟ್ಟಿಕೊಂಡು ಬಂದು ಪಿರ್ಯಾದಿದಾರರೊಂದಿಗೆ ಜಗಳ ತೆಗೆದಿದ್ದು, ಆ ಮೂಲಕ ಆರೋಪಿತರಾದ ನೀವೆಲ್ಲರೂ ಭಾರತೀಯ ನ್ಯಾಯ ಸಂಹಿತೆ-2023 ಕಲಂ 189(2) ಸಹವಾಚಕ 190 ರ ಅಡಿಯಲ್ಲಿ ಶಿಕ್ಷಾರ್ಹವಾಗುವ ಅಪರಾಧ ಎಸಗಿರುತ್ತೀರಿ ಎಂದು ಈ ನ್ಯಾಯಾಲಯದ ಸಂಜ್ಞಾನಕ್ಕೆ ಬಂದಿರುತ್ತದೆ.

2. ಎರಡನೇಯದಾಗಿ ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವು ಅಪರಾಧ ಎಸಗುವ ಏಕೊದ್ದೇಶದಿಂದ ಅಕ್ರಮ ಗುಂಪು ಕಟ್ಟಿಕೊಂಡು ಬಂದು ಪಿರ್ಯಾದಿಯೊಂದಿಗೆ ಜಗಳ ತೆಗೆದು, ದೊಂಬಿ ಎಬ್ಬಿಸಿದ್ದು, ಆ ಮೂಲಕ ಆರೋಪಿತರಾದ ನೀವೆಲ್ಲರೂ ಭಾರತೀಯ ನ್ಯಾಯ ಸಂಹಿತೆ-2023 ಕಲಂ 191(2) ಸಹವಾಚಕ 190 ರ ಅಡಿಯಲ್ಲಿ ಶಿಕ್ಷಾರ್ಹವಾಗುವ ಅಪರಾಧ ಎಸಗಿರುತ್ತೀರಿ ಎಂದು ಈ ನ್ಯಾಯಾಲಯದ ಸಂಜ್ಞಾನಕ್ಕೆ ಬಂದಿರುತ್ತದೆ.

3. ಮೂರನೇಯದಾಗಿ ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವು ಅಪರಾಧ ಎಸಗುವ ಏಕೊದ್ದೇಶದಿಂದ ಅಕ್ರಮ ಗುಂಪು ಕಟ್ಟಿಕೊಂಡು ಬಂದು ಪಿರ್ಯಾದಿ ಹಾಗೂ ಚಾಸಾ-4 ರವರೊಂದಿಗೆ ಜಗಳ ತೆಗೆದು, ಮಿಂಡ್ರಿ ಮಕ್ಕಳಾ, ಹಡಸಿ ಮಕ್ಕಳಾ ಅಂತಾ ಅವಾಚ್ಯ ಶಬ್ದಗಳಿಂದ ಬೈದಾಡಿದ್ದು, ಆ ಮೂಲಕ ಆರೋಪಿತರಾದ ನೀವೆಲ್ಲರೂ ಭಾರತೀಯ ನ್ಯಾಯ ಸಂಹಿತೆ-2023 ಕಲಂ 352 ಸಹವಾಚಕ 190 ರ ಅಡಿಯಲ್ಲಿ ಶಿಕ್ಷಾರ್ಹವಾಗುವ ಅಪರಾಧ ಎಸಗಿರುತ್ತೀರಿ ಎಂದು ಈ ನ್ಯಾಯಾಲಯದ ಸಂಜ್ಞಾನಕ್ಕೆ ಬಂದಿರುತ್ತದೆ.

4. ನಾಲ್ಕನೇಯದಾಗಿ ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವು ಅಪರಾಧ ಎಸಗುವ ಏಕೊದ್ದೇಶದಿಂದ ಅಕ್ರಮ ಗುಂಪು ಕಟ್ಟಿಕೊಂಡು ಬಂದು ಪಿರ್ಯಾದಿಯೊಂದಿಗೆ ಜಗಳ ತೆಗೆದು, 3 ನೇ ಆರೋಪಿ ಕೈಯಿಂದ ಪಿರ್ಯಾದಿಗೆ ಮೈ ಕೈಗೆ ಹೊಡೆದಿದ್ದು, ಉಳಿದ ಆರೋಪಿತರು ದೂಡಾಡಿ ಗಾಯಪಡಿಸಿದ್ದು, ಆ ಮೂಲಕ ಆರೋಪಿತರಾದ ನೀವೆಲ್ಲರೂ ಭಾರತೀಯ ನ್ಯಾಯ ಸಂಹಿತೆ-2023 ಕಲಂ 115(2) ಸಹವಾಚಕ 190 ರ ಅಡಿಯಲ್ಲಿ ಶಿಕ್ಷಾರ್ಹವಾಗುವ ಅಪರಾಧ ಎಸಗಿರುತ್ತೀರಿ ಎಂದು ಈ ನ್ಯಾಯಾಲಯದ ಸಂಜ್ಞಾನಕ್ಕೆ ಬಂದಿರುತ್ತದೆ.

5. ಐದನೇಯದಾಗಿ ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವು ಅಪರಾಧ ಎಸಗುವ ಏಕೊದ್ದೇಶದಿಂದ ಅಕ್ರಮ ಗುಂಪು ಕಟ್ಟಿಕೊಂಡು ಬಂದು ಪಿರ್ಯಾದಿ, ಚಾಸಾ-4 ಹಾಗೂ ಚಾಸಾ-5 ರವರೊಂದಿಗೆ ಜಗಳ ತೆಗೆದು, ಅವಾಚ್ಯ ಶಬ್ದಗಳಿಂದ ಬೈದಾಡಿ ಇನ್ನೊಮ್ಮೆ ನಮ್ಮ ಕಣದ ದಾರಿಯಲ್ಲಿ ಬಂದರೆ ನಿನ್ನ ಜೀವ ಸಹಿತ ಬಿಡುವುದಿಲ್ಲ ಅಂತಾ ಜೀವದ ಬೆದರಿಕೆ ಹಾಕಿದ್ದು, ಆ ಮೂಲಕ ಆರೋಪಿತರಾದ ನೀವೆಲ್ಲರೂ ಭಾರತೀಯ ನ್ಯಾಯ ಸಂಹಿತೆ-2023 ಕಲಂ 351(2) ಸಹವಾಚಕ 190 ರ ಅಡಿಯಲ್ಲಿ

ಶಿಕ್ಷಾರ್ಹವಾಗುವ ಅಪರಾಧ ಎಸಗಿರುತ್ತೀರಿ ಎಂದು ಈ ನ್ಯಾಯಾಲಯದ ಸಂಜ್ಞಾನಕ್ಕೆ ಬಂದಿರುತ್ತದೆ.

6. ಆರನೇಯದಾಗಿ, ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವು ಹಿಂದೂ ಲಿಂಗಾಯತ ಜಾತಿಗೆ ಸೇರಿದ್ದು, ಪಿರ್ಯಾದಿದಾರ ಹಿಂದೂ ಪರಿಶಿಷ್ಟ ಪಂಗಡ ಜಾತಿಗೆ ಸೇರಿದವರು ಎಂದು ಗೊತ್ತಿದ್ದರೂ ಸಹ ಅವರೊಂದಿಗೆ ಜಗಳ ತೆಗೆದು, ಸಾರ್ವಜನಿಕವಾಗಿ ತಳವಾರ ಜಾತಿಯವರ ಅಂತಾ ಜಾತಿ ಎತ್ತಿ ಬೈದಾಡಿ ಪರಿಶಿಷ್ಟ ಪಂಗಡಕ್ಕೆ ಅವಮಾನಗೊಳಿಸಿದ್ದು, ಆ ಮೂಲಕ ಆರೋಪಿತರಾದ ನೀವು ಎಸ್.ಸಿ/ಎಸ್.ಟಿ (POA) ಕಲಂ.3(1)(r) ರಡಿಯಲ್ಲಿ ಈ ನ್ಯಾಯಾಲಯದ ಸಂಜ್ಞಾನದಲ್ಲಿ ಶಿಕ್ಷಾರ್ಹ ಅಪರಾಧವನ್ನು ಎಸಗಿರುತ್ತೀರಿ.

ಮೇಲೆ ಹೇಳಿದ ಆರೋಪಣೆಗಳಿಗಾಗಿ ಹಾವೇರಿ ವಿಶೇಷ ನ್ಯಾಯಾಧೀಶರ ನ್ಯಾಯಾಲಯದಲ್ಲಿ ನಿಮ್ಮ ಮೇಲೆ ಮೊಕದ್ದಮೆ ನಡೆಯತಕ್ಕದ್ದು ಅಂತಾ ಆದೇಶಿಸಿದ್ದೇನೆ.

ದಿನಾಂಕಃ30.06.2026
ಹಾವೇರಿ.

ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು ಮತ್ತು ವಿಶೇಷ ನ್ಯಾಯಾಧೀಶರು